# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

**ಎಸ್‌ಸಿ. 45/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಶ್ರೀ ಬಾಲಚಂದ್ರ ಹೆಗ್ಡೆ | ಪ್ರಮಾಣ ಮಾಡಿಸಿದ ದಿನಾಂಕಃ | |
| ತಂದೆ/ಗಂಡನ ಹೆಸರು | ಃ ಶ್ರೀ ಶಿವರಾಮ ಹೆಗ್ಡೆ | 04.10.2023 | |
| ವಯಸ್ಸು | ಃ 54 ವರ್ಷ | | |
| ವೃತ್ತಿ | ಃ ಶಿಕ್ಷಕ | ಪ್ರಾ.ಸಾ. | ಃ 03 |
| ವಾಸಸ್ಥಳ | ಃ ಕುವೆಂಪುನಗರ | ಚಾ.ಸಾ. | ಃ 04 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನಾನು ವಿಶ್ವಚೇತನ ವಿದ್ಯಾಸಂಸ್ಥೆ, ಎನ್.ಆರ್.ಮೊಹಲ್ಲಾದಲ್ಲಿ ಸಹ ಶಿಕ್ಷಕನಾಗಿ ಕೆಲಸ ಮಾಡುತ್ತಿರುತ್ತೇನೆ. ನಾನು ಸಂಸ್ಕೃತದಲ್ಲಿ ಸ್ನಾತಕೊತ್ತರ ಪದವಿ ಪಡೆದಿದ್ದೇನೆ. ದಿಃ*08.03.1999* ರಂದು ನಾನು ವಿಶ್ವಚೇತನ ವಿದ್ಯಾಸಂಸ್ಥೆಗೆ ಕೆಲಸಕ್ಕೆ ಸೇರಿದ್ದೆ. ನಾನು ಕೆಲಸಕ್ಕೆ ಸೇರಿದಾಗ ಸಂಸ್ಥೆಗೆ ಗೌರವಯುತವಾಗಿ ಕಾಣಿಕೆ ಎಂದು ಪರಶಿವಮೂರ್ತಿಯಾಗಿ *40,000/-* ರೂಪಾಯಿಗಳನ್ನು ಪಾವತಿ ಮಾಡಿದ್ದೆ. ಆ ಹಣವನ್ನು ಕೆಲಸಕ್ಕೆ ಸೇರುವ ಸಲುವಾಗಿ ಪಾವತಿ ಮಾಡಿದ್ದೆ. ನಾನು ಕೆಲಸಕ್ಕೆ ಸೇರುವಾಗ ಮೃತ ಪರಶಿವಮೂರ್ತಿಯವರು ಸಂಸ್ಥೆಯ ಗೌರವ ಕಾರ್ಯದರ್ಶಿಯಾಗಿದ್ದರು. ಒಬ್ಬ ಮುನಿಸಿದ್ದೇಗೌಡರು ಸಂಸ್ಥೆಯ ಅಧ್ಯಕ್ಷರಾಗಿದ್ದರು. ನನ್ನೊಂದಿಗೆ ಚಾ.ಸಾ-3 ಬಸವಲಿಂಗಸ್ವಾಮಿ ಸಹ ಶಿಕ್ಷಕರಾಗಿ ಸೇರಿದ್ದರು. ನಾನು ಕೆಲಸಕ್ಕೆ ಸೇರಿದಾಗ ಯಾರು ಆ ಶಾಲೆಯ ಮುಖ್ಯ ಶಿಕ್ಷಕರಾಗಿದ್ದರು ಎಂದು ಈಗ ನೆನಪಿಲ್ಲ. ಆ ಕಾಲಕ್ಕೆ ವಿಶ್ವನಾಥ, ವಿಜಯ, ಶಶಿಕಲಾ ಮತ್ತು ಪರಶಿವ ಇವರು ಸಹ ಆ ಶಾಲೆಗೆ ಸಹಶಿಕ್ಷಕರಾಗಿ ಕೆಲಸ ಮಾಡುತ್ತಿದ್ದರು. ಬಸವಲಿಂಗಸ್ವಾಮಿಯವರು ಟಿ.ನರಸೀಪುರ ವಿಶ್ವಚೇತನ

ವಿದ್ಯಾಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದರು. ನಾನು ಕೆಲಸಕ್ಕೆ ಸೇರಿ 2 ವರ್ಷಗಳವರೆಗೆ ನನಗೆ ಸಂಬಳ ಬರುತ್ತಿರಲಿಲ್ಲ ಆದ್ದರಿಂದ ನನಗೆ ಜೀವನ ಕಷ್ಟವಾಗಿದ್ದರಿಂದ ನಾನು ಪುನಃ ಕುವೆಂಪುನಗರ ಜ್ಞಾನಗಂಗ ಶಾಲೆಗೆ ಸೇರಿದ್ದೆ.

2. ಆ ಕಾಲಕ್ಕೆ ನಾನು ಬೆ.7 ರಿಂದ 9 ವಿಶ್ವಚೇತನ ವಿದ್ಯಾಸಂಸ್ಥೆಯಲ್ಲಿ ಮತ್ತು ಬೆ.10 ರಿಂದ ಸಂಜೆ 4 ರವರೆಗೆ ಜ್ಞಾನಗಂಗ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದೆ. 2014 ನೇ ಇಸವಿಯಲ್ಲಿ ಜ್ಞಾನಗಂಗ ಶಾಲೆಯಲ್ಲಿ ಹಳೇ ಶಿಕ್ಷಕರನ್ನು ಕೆಲಸದಿಂದ ತೆಗೆದಿದ್ದರು. ಆ ಕಾಲಕ್ಕೆ ನನ್ನನ್ನು ಸಹ ಕೆಲಸದಿಂದ ತೆಗೆದಿದ್ದರು. ಆಗ ನಾನು ನನ್ನ ಕುಟುಂಬದ ವ್ಯಕ್ತಿಗಳನ್ನು ನನ್ನ ಸ್ವಂತ ಊರಾದ ಶಿರಸಿಗೆ ಕಳುಹಿಸಿ ನಾನು ಮಾತ್ರ ಇಲ್ಲಿಯೇ ಉಳಿದುಕೊಂಡಿದ್ದೆ. ನಂತರ ಅದೇ ವರ್ಷ 4 ನೇ ಆರೋಪಿತ ವಿಶ್ವನಾಥ ಇವರು ಶಾಲೆಯನ್ನು ಪುನಃ ಪ್ರಾರಂಭಿಸುತ್ತಿದ್ದೇವೆ ಬಾಕಿ ವೇತನವು ಸಹ ಬರುತ್ತದೆ ಪುನಃ ಕೆಲಸಕ್ಕೆ ಸೇರಿಕೊಳ್ಳಿ ಎಂದು ಹೇಳಿದ್ದರಿಂದ ನಾನು ಪುನಃ ವಿಶ್ವಚೇತನ ಶಾಲೆಗೆ ಕೆಲಸಕ್ಕೆ ಸೇರಿದ್ದೆ. ಆ ಕಾಲಕ್ಕೂ ಸಹ ನಾನು ಎನ್.ಆರ್.ಮೊಹಲ್ಲಾ ಶಾಲೆಯಲ್ಲಿ ಕೆಲಸಕ್ಕೆ ಸೇರಿದ್ದೆ. ನಂತರ 4 ನೇ ಆರೋಪಿತ ವಿಶ್ವನಾಥ ಇವರು ಒಡಾಡಿ ಸಂಬಳ ಬರುವಂತೆ ಮಾಡಿದ್ದರು. ಆದಾಗಿ 2 ವರ್ಷಗಳ ಬಳಿಕ ಒಂದೇ ಬಾರಿಗೆ 5–6 ಲಕ್ಷ ರೂಪಾಯಿ ಬಾಕಿ ವೇತನ ಬಂದಿತ್ತು. ಆ ಕಾಲಕ್ಕೆ ವಿಶ್ವನಾಥ ಇವರು ನಾನು ಓಡಾಡಿ ಅಧಿಕಾರಿಗಳಿಗೆ ಖರ್ಚು ಮಾಡಿ ಹಣ ಬಿಡುಗಡೆ ಮಾಡಿಸಿದ್ದೇನೆ ಆದ್ದರಿಂದ ಆ ಹಣ ನಿಮಗೆ ಕೊಡಲು ಆಗುವುದಿಲ್ಲ ಎಂದು ಹೇಳಿದ್ದರು ಮತ್ತು ಆ ಬಾಕಿ ವೇತನದ ಹಣವನ್ನು ನಮ್ಮಿಂದ ಪಡೆದುಕೊಂಡಿದ್ದರು. ನೀಲಕಂಠ ಸ್ವಾಮಿ ಮಠದಲ್ಲಿ ಸಂಸ್ಥೆಯ ಸಭೆಗಳನ್ನು ನಡೆಸುತ್ತಿದ್ದರು.

3. 2017 ನೇ ಇಸವಿಯಲ್ಲಿ ನನಗೆ ಮಾಸಿಕ 40,000/- ರೂಪಾಯಿ ಸಂಬಳ ಬರತ್ತಿತ್ತು. ಆ ಸಂಬಳದ ಹಣದಲ್ಲಿ 15-20,000/- ರೂಪಾಯಿಗಳನ್ನು ವಿಶ್ವನಾಥ ಇವರಿಗೆ ಸಂಸ್ಥೆಗೆ ಪಾವತಿಸಲು ಕೊಡುತ್ತಿದ್ದೆ. ಅವರೇ ಆ ಹಣವನ್ನು ಕೇಳಿ ಪಡೆದುಕೊಳ್ಳುತ್ತಿದ್ದರು. ನಾನು ಆ ಹಣವನ್ನು ಕೊಡಲು ತಪ್ಪಿದಾಗ ಅವರು ನನ್ನನ್ನು ಬೈಯುತ್ತಿದ್ದರು ಮತ್ತು ಕೆಲಸದಿಂದ ತೆಗೆದುಹಾಕುವುದಾಗಿ ಹೇಳುತ್ತಿದ್ದರು. ಸಂಸ್ಥೆಯ ಸಭೆಗಳಲ್ಲಿ ಆ ರೀತಿ ಹಣ ಕೊಡದೇ ಇದ್ದ ಬಗ್ಗೆ ಚರ್ಚೆ ನಡೆಯುತ್ತಿತ್ತು ಮತ್ತು ಘರ್ಷಣೆಗಳು ನಡೆಯುತ್ತಿದ್ದವು. 2019 ರಲ್ಲಿ ನನ್ನನ್ನು ಎನ್.ಆರ್.ಮೊಹಲ್ಲಾ ದಿಂದ ಟಿ.ನರಸೀಪುರ ಶಾಲೆಗೆ ವರ್ಗಾವಣೆ ಮಾಡಿದ್ದರು ಮತ್ತು ಚಾ.ಸಾ-3 ರವರನ್ನು ಟಿ.ನರಸೀಪುರ ಶಾಲೆಯಿಂದ ಎನ್.ಆರ್.ಮೊಹಲ್ಲಾ ಶಾಲೆಗೆ ವರ್ಗಾವಣೆ ಮಾಡಿದ್ದರು. ನಂತರ ಪೆಬ್ರವರಿ 2020 ರಂದು ನನ್ನ ತಂದೆ ಮರಣಹೊಂದಿದ್ದರು. ಆ ಕಾಲಕ್ಕೆ ನನ್ನ ತಂದೆಯ ಮರಣದ ಎಲ್ಲಾ ಕಾರ್ಯಗಳನ್ನು ಮುಗಿಸಿ ಪುನಃ ಪೆಬ್ರವರಿ ಕೊನೆಯಲ್ಲಿ ವಾಪಸ್ಸು ಕೆಲಸಕ್ಕೆ ಸೇರಿದ್ದೆ. ಆದರೆ ಪೆಬ್ರವರಿ 2020 ನೇ ವರ್ಷದ ಸಂಬಳ ಪಾವತಿ ಮಾಡಿರಲಿಲ್ಲ. ಆಗ ನಾನು ನನ್ನ ಸಹದ್ಯೋಗಿಗಳಿಗೆ ನನ್ನ ಸಂಬಳ ಬಂದಿಲ್ಲ ಎಂದು ಹೇಳಿದಾಗ ಅವರು ನಿನ್ನ ಸಂಬಳ ನಿಲ್ಲಿಸಿದ್ದಾರೆ ಎಂದು ಹೇಳಿದ್ದರು. ನಾನು ಪ್ರತಿ ತಿಂಗಳು ವಂತಿಗೆ ಹಣವನ್ನು ಕೊಡದೇ ಇದ್ದಾಗ ಪರಶಿವಮೂರ್ತಿಯವರು ಬೈಯುತ್ತಿದ್ದರು. ಆ ಹಣ ಕೊಡದೇ ಇದ್ದಾಗ ನಮ್ಮನ್ನು ತುಂಬಾ ಕೆಟ್ಟದಾಗಿ ನಡೆಸಿಕೊಳ್ಳುತ್ತಿದ್ದರು.

4. ತಿಂಗಳಿಗೊಮ್ಮೆ ಸಭೆಗಳು ನಡೆದಾಗ ಯಾರು ವಂತಿಗೆ ಕೊಟ್ಟಿದ್ದಾರೆ ಮತ್ತು ಯಾರು ಕೊಟ್ಟಿಲ್ಲ ಎಂದು ಚರ್ಚೆ ಆಗುತ್ತಿತ್ತು ಆ ಕಾಲಕ್ಕೆ ಪರಶಿವಮೂರ್ತಿಯವರು ಹಣ ಕೊಡದೇ ಇದ್ದವರಿಗೆ ಬೈಯುತ್ತಿದ್ದರು ಮತ್ತು ಕೆಲಸದಿಂದ ತೆಗೆಯುವುದಾಗಿ ಹೇಳಿದ್ದರು. ಒಂದು ಬಾರಿ ಆ

ರೀತಿ ಚರ್ಚೆ ನಡೆಯುತ್ತಿರುವಾಗ ವಿಶ್ವನಾಥ ಇವರು ಪರಶಿವಮೂರ್ತಿಯವರಿಗೆ ನಿಮ್ಮದು ಅತಿಯಾಯಿತು ಎಷ್ಟು ಅಂತ ನಿಮಗೆ ಹಣ ಕೊಡುವುದು ನಿಮ್ಮನ್ನು ಸಹಿಸಿಕೊಳ್ಳಲು ಆಗುತ್ತಿಲ್ಲ ನಿಮ್ಮನ್ನು ಮುಗಿಸಬೇಕು ಎಂದು ಆವೇಶದಿಂದ ಮಾತನಾಡಿದ್ದರು. ಆಗ ನಾವು ಉಳಿದ ಸಹಶಿಕ್ಷಕರು ವಿಶ್ವನಾಥ ಇವರಿಗೆ ಸಮಾಧಾನ ಮಾಡಿದ್ದೇವು. ವಿಶ್ವನಾಥ ಯಾವ ಕಾರಣಕ್ಕೆ ಆ ರೀತಿ ಹೇಳಿದ್ದರು ಎಂದು ನನಗೆ ಗೊತ್ತಿಲ್ಲ. *2020* ರ ಮಾರ್ಚ್ ನಲ್ಲಿ ನಾನು ಪುನಃ ಕೆಲಸಕ್ಕೆ ಸೇರಿದ್ದೆ. ಆ ಕಾಲಕ್ಕೆ ನನ್ನ ಮಗಳು *10* ನೇ ತರಗತಿ ಪರೀಕ್ಷೆ ಬರೆಯುತ್ತಿದ್ದ ಕಾರಣ ನಾನು ಅವಳೊಂದಿಗೆ ಇರಬೇಕಾದ ಅವಶ್ಯಕತೆ ಬಂದಿತ್ತು. ಆಗ ನಾನು ***permission*** ಪಡೆದುಕೊಂಡು ಊರಿಗೆ ಹೋಗಿದ್ದೆ. ಆ ಬಳಿಕ ಕೊರೋನಾ ಲಾಕ್ ಡ್ವಾನ್ ಪ್ರಾರಂಭವಾಗಿತ್ತು. ನಂತರ ಜೂನ್ ಅಥವಾ ಜುಲೈ *2020* ರಲ್ಲಿ ಲಾಕ್ ಡ್ವಾನ್ ಸಡಲಿಕೆಯಾಗಿದ್ದರಿಂದ ನಾನು ವಾಪಸ್ಸು ಬಂದು ಪುನಃ ಕೆಲಸಕ್ಕೆ ಸೇರಿದ್ದೆ. ಆಗಲೂ ಸಹ ಹಣ ಕೊಡಲಿಲ್ಲ ಎನ್ನುವ ಕಾರಣಕ್ಕೆ ನನ್ನನ್ನು ಪರಶಿವಮೂರ್ತಿಯವರು ಬೈಯುತ್ತಿದ್ದರು.

*5.* ಸೆಪ್ಟೆಂಬರ್ *2020* ರಲ್ಲಿ *3* ನೇ ಆರೋಪಿತ ಸಿದ್ದರಾಜು ಇವರ ಮೂಲಕ ನಾಳೆ ನಿಮ್ಮ ವಿಷಯ ಚರ್ಚೆ ಮಾಡಲು ಮೀಟಿಂಗ್ ಇದೆ ಎಂದು ನನಗೆ ಹೇಳಿಸಿದ್ದರು. ಜೂನ್ *2020* ರಲ್ಲಿ ಆಗಿದ್ದ ಮೀಟಿಂಗ್ ಬಗ್ಗೆ ನನಗೆ ಗೊತ್ತಿಲ್ಲ. ಆದರೆ ಆ ಕಾಲಕ್ಕೆ ಮೀಟಿಂಗ್ ನಡೆದಿರಲಿಲ್ಲ ಆದಾದ ಮರುದಿನ ಪತ್ರಿಕೆ ಮೂಲಕ ಪರಶಿವಮೂರ್ತಿಯವರ ಕೊಲೆಯಾಗಿದೆ ಎಂದು ಗೊತ್ತಾಗಿತ್ತು. ಆ ಕಾಲಕ್ಕೆ ಪತ್ರಿಕೆ ಮೂಲಕವೇ ಕೋರ್ಟ್ ಮುಂದೆ ಇರುವ *5* ಜನ ಆರೋಪಿತರು ಕೊಲೆ ಮಾಡಿದ್ದಾರೆ ಎಂದು ಗೊತ್ತಾಗಿತ್ತು. ಈ ಎಲ್ಲಾ ವಿಷಯದ ಬಗ್ಗೆ ನಾನು ತನಿಖಾಧಿಕಾರಿ ಮುಂದೆ ನವೆಂಬರ್ *2020* ರಲ್ಲಿ ಹೇಳಿಕೆ ಕೊಟ್ಟಿದ್ದೇನೆ. ಅದೇ ಕಾಲಕ್ಕೆ ಮೈಸೂರಿನ ಕೋರ್ಟ್ ನಲ್ಲಿ ಸಹ ನನ್ನ ಹೇಳಿಕೆ

ಕೊಟ್ಟಿದ್ದೇನೆ. ಆ ಕಾಲಕ್ಕೂ ಸಹ ಇದೇ ರೀತಿ ಈ ಮೇಲೆ ಹೇಳಿದಂತೆ ಹೇಳಿಕೆ ಕೊಟ್ಟಿದ್ದೆ. ಈಗ ನಾನು ನೋಡುತ್ತಿರುವ ದಾಖಲೆ ನ್ಯಾಯಾಧೀಶರ ಮುಂದೆ ಕೊಟ್ಟಿರುವ ಹೇಳಿಕೆ ಇದ್ದು ಅದರಲ್ಲಿರುವ ಸಹಿಗಳು ನನ್ನದೇ ಇದೆ ಅದನ್ನು ನಿ.ಪಿ-42 ಮತ್ತು ಸಹಿಗಳನ್ನು ನಿ.ಪಿ-42(ಎ), (ಬಿ) ಮತ್ತು (ಸಿ) ಎಂದು ಗುರುತಿಸಿದೆ.

ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-

6. ನಾನು ಕೆಲಸಕ್ಕೆ ಸೇರುವಾಗ ವಿಶ್ವಚೇತನ ವಿದ್ಯಾಸಂಸ್ಥೆ ಕಾರ್ಯದರ್ಶಿ ಪರಶಿಮೂರ್ತಿಯವರಿಗೆ 30,000/- ಗಳನ್ನು ಕೊಟ್ಟಿರುವುದಾಗಿ ಹೇಳಿಕೆ ಕೊಟ್ಟಿದ್ದೆ ಎಂದರೆ ನಿಜ. ನಾಗರಾಜು ಇವರು ವಿಶ್ವಚೇತನ ವಿದ್ಯಾಸಂಸ್ಥೆ ಅಧ್ಯಕ್ಷರಾಗಿದ್ದರು ಹೇಳಿಕೆ ಕೊಟ್ಟಿದ್ದೆ ಎಂದರೆ ನಿಜ. ನಾನು ಕೆಲಸಕ್ಕೆ ಸೇರಿದಾಗ ವಿಶ್ವನಾಥ ಇವರು ಎನ್.ಆರ್.ಮೊಹಲ್ಲಾದ ವಿಶ್ವಚೇತನ ಸಂಸ್ಕೃತ ಪಾಠಶಾಲೆಯಲ್ಲಿ ಮುಖ್ಯಶಿಕ್ಷಕರಾಗಿ ಕೆಲಸ ಮಾಡುತ್ತಿದ್ದರ ಎಂದು ಹೇಳಿಕೆ ಕೊಟ್ಟಿದ್ದೆ ಎಂದರೆ ನಿಜ. ನಾನು ಕೆಲವು ದಿನ ಎರಡು ಶಾಲೆಯಲ್ಲಿ ಕೆಲಸ ಮಾಡಿ ನಂತರ ಎರಡು ಕಡೆ ಕೆಲಸ ಮಾಡಲು ತೊಂದರೆ ಆಗಿದ್ದರಿಂದ ಮತ್ತು ವಿಶ್ವಚೇತನ ಸಂಸ್ಕೃತ ಪಾಠಶಾಲೆಯಲ್ಲಿ ಸಂಬಳ ನೀಡದೇ ಇದುದ್ದರಿಂದ ಕೇವಲ ಜ್ಞಾನಗಂಗಾ ಶಾಲೆಯಲ್ಲಿ ಕೆಲಸ ಮುಂದುವರೆಸಿದ್ದೆ ಎಂದರೆ ನಿಜ. ನಂತರ 2014 ರಲ್ಲಿ ಜ್ಞಾನಗಂಗಾ ಶಾಲೆಯಲ್ಲಿ ನನ್ನನ್ನು ಕೆಲಸದಿಂದ ತೆಗೆದುಹಾಕಿದ ಬಳಿಕ 2015 ರಲ್ಲಿ ನಾನು ಪುನಃ ವಿಶ್ವಚೇತನ ಸಂಸ್ಕೃತ ಪಾಠಶಾಲೆಗೆ ಕೆಲಸಕ್ಕೆ ಸೇರಿದ್ದೆ ಎಂದರೆ ನಿಜ. ಆ ಕಾಲಕ್ಕೆ ಬಾಕಿ

ವೇತನದ ಹಣ ತಲಾ ಒಬ್ಬರಿಗೆ *5* ರಿಂದ *6* ಲಕ್ಷ ರೂಪಾಯಿಗಳಂತೆ ಒಟ್ಟು *52* ಲಕ್ಷ ರೂಪಾಯಿ ಹಣ ಬಂದಾಗ ಆ ಹಣವನ್ನು ನಮಗೆ ಯಾರಿಗೂ ನೀಡದೇ ಪರಶಿವಮೂರ್ತಿ ಮತ್ತು ವಿಶ್ವನಾಥ ಇವರೇ ಇಟ್ಟುಕೊಂಡಿದ್ದರು ಎಂದರೆ ನಾನು ವಿಶ್ವನಾಥ ಇವರಿಗೆ ನೀಡಿದ್ದೆ ಅವರು ಏನು ಮಾಡಿದ್ದರು ಎಂದು ಗೊತ್ತಿಲ್ಲ.

*7.* ನಾನು *2017* ರಿಂದ ಇಚೀಗೆ ಪ್ರತಿ ತಿಂಗಳು ಸಂಬಳದ *15,000/-* ರೂಪಾಯಿ ಹಣವನ್ನು ಪರಶಿವಮೂರ್ತಿಯವರಿಗೆ ಕೊಡುತ್ತಿದ್ದೆ ಮತ್ತು ಆ ರೀತಿ ಹಣ ಕೊಡುವುದು ತಡವಾದಾಗ ಪರಶಿವಮೂರ್ತಿಯವರು ನನಗೆ ಗೈರುಹಾಜರಿ ತೋರಿಸಿ ಸಂಬಳ ನಿಲ್ಲಿಸಿ ಟಿ.ನರಸೀಪುರ ಶಾಲೆಗೆ ವರ್ಗಾವಣೆ ಮಾಡಿದ್ದರು ಎಂದರೆ ನಿಜ. ಶಿಕ್ಷಕರು ತಮ್ಮ ಸಂಬಳದ ಹಣವನ್ನು ಕೊಡದೇ ಇದ್ದರೇ ಪರಶಿವಮೂರ್ತಿಯವರು ಶಿಕ್ಷಕರಿಗೆ ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದರು ಮತ್ತು ಸರಿಯಾಗಿ ಸಂಬಳ ಮತ್ತು ಇಂಕ್ರಿಮೆಂಟ್ ಗಳನ್ನು ಕೊಡುತ್ತಿರಲಿಲ್ಲ ಎಂದರೆ ನಿಜ. ನಾನು ಪ್ರತಿ ತಿಂಗಳು ಸಂಬಳದ ಹಣದಲ್ಲಿ *15,000/-* ರೂಪಾಯಿಗಳನ್ನು ನೀಡಬೇಕು ಎಂದು ಪರಶಿವಮೂರ್ತಿಯವರು ಬೇಡಿಕೆ ಇಟ್ಟಿದ್ದರು ಮತ್ತು ನಾನು ಆ ಹಣವನ್ನು ವಿಶ್ವನಾಥ ಇವರಿಗೆ ನೀಡುತ್ತಿದ್ದೆ ಎಂದರೆ ನಿಜ. ಪರಶಿವಮೂರ್ತಿಯವರು ವಿಶ್ವನಾಥ ಮತ್ತು ಪರಶಿವ ಇವರಿಗೆ ನಿಮ್ಮ ರಿಟೈರ್ ಮೆಂಟ್ ಹಣ ಸಂಸ್ಥೆಗೆ ನೀಡಿ ಎಂದು ಕಿರುಕುಳ ನೀಡುತ್ತಿದ್ದರು ಎಂದರೆ ನಿಜ. ಹಣ ಕೊಡದೇ ಇದ್ದ ಶಿಕ್ಷಕರಿಗೆ ಪರಶಿವಮೂರ್ತಿಯವರು ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದರು ಎಂದರೆ ನಿಜ. ಸಭೆ ಮುಗಿದು ಪರಶಿವಮೂರ್ತಿಯವರು ಹೋದ ಮೇಲೆ ವಿಶ್ವನಾಥ ಇವರು ನಮ್ಮೆಲ್ಲರ ಮುಂದೆ ಪರಶಿವಮೂರ್ತಿಯವರನ್ನು ಕೊಲೆ ಮಾಡದೇ ಇದ್ದರೇ ಸರಿಯಾಗುವುದಿಲ್ಲ ಇವನನ್ನು ಮುಗಿಸಬೇಕು ಆಗ ಎಲ್ಲರ ಸಮಸ್ಯೆಗೂ ಪರಿಹಾರ ಸಿಗುತ್ತದೆ ಎಂದು ಹೇಳುತ್ತಿದ್ದರು ಎಂದರೆ ನಿಜ.

*8.* ಜೂನ್ *2020* ರ ಸಭೆ ಮೈಸೂರಿನ ನೀಲಕಂಠ ಸ್ವಾಮಿಯ ಮಠದಲ್ಲಿ ನಡೆದಾಗ ಎಲ್ಲಾ ಶಿಕ್ಷಕರ ಸಮ್ಮುಖದಲ್ಲಿ ಪರಶಿವಮೂರ್ತಿಯವರು ವಿಶ್ವನಾಥ ಇವರಿಗೆ ನಮ್ಮ ಸಂಸ್ಥೆಗೆ ಸ್ವಂತ ಬಿಲ್ಡಿಂಗ್ ಇಲ್ಲ ಎಲ್ಲಾದರೂ ಜಾಗ ತೆಗೆದುಕೊಂಡು ಸ್ವಂತ ಬಿಲ್ಡಿಂಗ್ ಕಟ್ಟುವುದಕ್ಕೆ ಹಣ ಬೇಕು ನೀವು ಕೊಡಿ ಎಂದು ಕೇಳಿದಾಗ ವಿಶ್ವನಾಥ ಇವರು ಪರಶಿವಮೂರ್ತಿಗೆ ನಿನ್ನ ಕಿರುಕುಳ ಜಾಸ್ತಿಯಾಯಿತು ಬೋಳಿ ಮಗನೇ ನಿನ್ನ ಮನೆಗೆ ಬಂದು ನಿನಗೆ ರಾಡಿನಲ್ಲಿ ಹೊಡೆದು ಕೊಲೆ ಮಾಡುತ್ತೇನೆ ನಿನ್ನನ್ನು ಉಳಿಸುವುದಿಲ್ಲ ಎಂದು ಕೂಗಾಡಿದ್ದರು ಮತ್ತು ಆ ಕಾಲಕ್ಕೆ ನಾನು, ಇತರೇ ಶಿಕ್ಷಕರಾದ ಪರಶಿವ.ಪಿ, ಬಸವಲಿಂಗಸ್ವಾಮಿ ಮತ್ತು ಇತರರು ವಿಶ್ವನಾಥ ಇವರನ್ನು ಸಮಾಧಾನ ಮಾಡಿದ್ದೇವು ಮತ್ತು ಅಧ್ಯಕ್ಷರಾದ ನಾಗರಾಜು ಇವರು ಪರಶಿವಮೂರ್ತಿಯವರನ್ನು ಸಮಾಧಾನ ಮಾಡಿದ್ದರು ಎಂದರೆ ನಿಜ. ಪರಶಿವಮೂರ್ತಿ ಇವರ ಕಿರುಕುಳ ತಾಳಲಾರದೇ ವಿಶ್ವನಾಥ ಮತ್ತು ಪರಶಿವ ಇವರು ಅವರ ಸ್ನೇಹಿತರಾದ ಮಡಿವಾಳಸ್ವಾಮಿ ಶಾಲೆಯ ಶಿಕ್ಷಕರಾದ ಸಿದ್ದರಾಜು ಮತ್ತು ಇತರರೊಂದಿಗೆ ಸೇರಿಕೊಂಡು ಪರಶಿವಮೂರ್ತಿ ಇವರನ್ನು ಕೊಲೆ ಮಾಡಿರುತ್ತಾರೆ ಎಂದು ನನಗೆ ಗೊತ್ತಾಗಿತ್ತು ಎಂದರೆ ನಿಜ. ನ್ಯಾಯಾಧೀಶರ ಮುಂದೆ ಹೇಳಿಕೆ ಕೊಟ್ಟಾಗಲೂ ಜೂನ್ *2020* ರ ಸಭೆಯಲ್ಲಿ ನನ್ನನ್ನು ಹಣ ಕೇಳಿದಾಗ ನನಗೆ ಸಂಬಳ ಆಗಿಲ್ಲ ಹೇಗೆ ಹಣ ಕೊಡಲಿ ಎಂದು ಅವರಿಗೆ ಹೇಳಿದ್ದೆ ಎಂದರೆ ನಿಜ. ಆ ಸಭೆಯ ಕಾಲಕ್ಕೆ ವಿಶ್ವನಾಥ ಮತ್ತು ಪರಶಿವಮೂರ್ತಿ ನಡುವೆ ಹಣಕಾಸಿನ ವಿಚಾರವಾಗಿ ಗಲಾಟೆ ಆಗಿತ್ತು ಎಂದು ಹೇಳಿಕೆ ಕೊಟ್ಟಿದ್ದೆ ಎಂದರೆ ನಿಜ. ಆ ಕಾಲಕ್ಕೆ ವಿಶ್ವನಾಥ ಇವರು ಪರಶಿವಮೂರ್ತಿಗೆ ನಿನ್ನ ಮನೆಗೆ ಬಂದು ಹೊಡೆಯುತ್ತೇನೆ ಮತ್ತು ಸಾಯಿಸುತ್ತೇನೆ ಎಂದು ಹೇಳಿರುವುದಾಗಿ ಆ ಕಾಲಕ್ಕೆ ಹೇಳಿದ್ದೆ ಎಂದರೆ ನಿಜ.

<u>ಪಾಟೀ ಸವಾಲು ಃ 1 ನೇ ಆರೋಪಿ ಪರ ವಕೀಲರಾದ ಶ್ರೀ ಸಿ.ಎಂ.ಜಿ ರವರಿಂದಃ-</u>

*9.* ಪರಶಿವಮೂರ್ತಿಯವರು ಮರಣಹೊಂದಿದಾಗ ನಾನು ಅವರನ್ನು ನೋಡಲು ಹೋಗಿಲ್ಲ. ಪರಶಿವಮೂರ್ತಿಯವರ ಮರಣದ ಬಳಿಕ ಯಾವತ್ತು ನಾನು ಅವರ ನಿವೇದಿತ ನಗರದ ಮನೆಗೆ ಹೋಗಿಲ್ಲ. ನನ್ನೊಂದಿಗೆ ಕೆಲಸ ಮಾಡುತ್ತಿದ್ದ ಸಹಶಿಕ್ಷಕರು ಪರಶಿವಮೂರ್ತಿಯವರ ಮನೆಗೆ ಹೋಗಿದ್ದರೋ ಇಲ್ಲವೊ ನನಗೆ ಗೊತ್ತಿಲ್ಲ. *2019* ರ ನವೆಂಬರ್ ನಲ್ಲಿ ನನ್ನ ತಾಯಿ ಮರಣಹೊಂದಿದ್ದರು ಎಂದರೆ ನಿಜ. *2020* ರ ಫೆಬ್ರವರಿಯಲ್ಲಿ ನನ್ನ ತಂದೆ ಮರಣಹೊಂದಿದ್ದರು ಎಂದರೆ ನಿಜ. ಆ ಕಾಲಕ್ಕೆ ನಾನು ಕಾರ್ಯ ಮಾಡಲು ಶಿರಸಿಗೆ ಹೋಗಿದ್ದೆ ಎಂದರೆ ನಿಜ. ಪರಶಿವಮೂರ್ತಿಯವರು ನನಗೆ ವೈಯಕ್ತಿಕವಾಗಿ ತೊಂದರೆ ಕೊಟ್ಟಿದ್ದರಿಂದ ನನಗೆ ಅವರ ಮೇಲೆ ಕೋಪ ಇತ್ತು ಎಂದರೆ ಸರಿಯಲ್ಲ. ಸಂಬಳದ ಹಣದಲ್ಲಿ ಕಟಾವು ಮಾಡಿದ ಬಗ್ಗೆ ನಾನು ದೂರು ಕೊಟ್ಟಿಲ್ಲ. ನಾನು ವಿಶ್ವನಾಥ ವಿರುದ್ದವೂ ಸಹ ದೂರು ಕೊಟ್ಟಿಲ್ಲ ಎಂದರೆ ನಿಜ. ನಾನು ಲಾಕ್ ಡ್ವಾನ್ ಗಿಂತ ಮೊದಲು ನನ್ನ ಮಗಳ ಪರೀಕ್ಷೆ ಸಲುವಾಗಿ ಊರಿಗೆ ಹೋಗಿದ್ದೆ ನಂತರ ಪುನಃ ಯಾವತ್ತು ವಾಪಸ್ಸು ಮೈಸೂರಿಗೆ ಬಂದಿದ್ದೇನೆ ಎಂದು ನೆನಪಿಲ್ಲ. ಲಾಕ್ ಡ್ವಾನ್ ಮುಗಿದ ಬಳಿಕ ನಾನು ಒಂದು ಮೀಟಿಂಗ್ ಗೆ ಹಾಜರಾಗಿದ್ದೆ ಆದರೆ ಅದು ಯಾವಾಗ ನಡೆದಿತ್ತು ಎಂದು ತಿಂಗಳು ನೆನಪಿಲ್ಲ. ಅದು ಶಿಕ್ಷಕರ ಸಭೆ ಇತ್ತು. ನಾನು ಕೆಲವೊಮ್ಮೆ ಸಂಸ್ಥೆಯ ***Board of Director meeting*** ಹಾಜರಾಗಿದ್ದೇನೆ.

*10.* ಪರಶಿವಮೂರ್ತಿಯವರ ಕೊಲೆಯಾದ ಮರುದಿನ ನನಗೆ ಪತ್ರಿಕೆಯಲ್ಲಿ ನೋಡಿದಾಗ ಆ ಬಗ್ಗೆ ಗೊತ್ತಾಗಿತ್ತು. ದಿಃ*21.09.2020* ರಂದು ನನ್ನನ್ನು ಸರಸ್ವತಿಪುರಂ ಪೋ.ಠಾಣೆಗೆ ಕರೆಸಿದ್ದರು ಆ

ಕಾಲಕ್ಕೆ ವಿಶ್ವನಾಥ ಮತ್ತು ಪರಶಿವ ಅಲ್ಲಿ ಹಾಜರಿದ್ದರು. ಆದಾದ ನಂತರ ನಾನು ಪುನಃ ಯಾವತ್ತು ಪೋ.ಠಾಣೆಗೆ ಹೋಗಿಲ್ಲ. ಪೋ.ಠಾಣೆಗೆ ಹೋದಾಗ ಪರಶಿವಮೂರ್ತಿಯವರ ಕೊಲೆಯ ಬಗ್ಗೆ ವಿಚಾರಿಸಿದ್ದರು ಆಗ ನಾನು ನನಗೆ ಗೊತ್ತಿಲ್ಲ ಎಂದು ಹೇಳಿದ್ದೆ. ಆದಾದ ನಂತರ ನನ್ನನ್ನು ನ್ಯಾಯಾಲಯಕ್ಕೆ ಬಂದು ಹೇಳಿಕೆ ಕೊಡಲು ಹೇಳಿದ್ದರು. ಮಡಿವಾಳಸ್ವಾಮಿ ಸಂಸ್ಕೃತ ಪಾಠಶಾಲೆಗೂ ವಿಶ್ವಚೇತನ ಸಂಸ್ಕೃತ ಪಾಠಶಾಲೆಗೂ ಯಾವುದೇ ರೀತಿ ಸಂಬಂದ ಇಲ್ಲ ಎಂದರೆ ನಿಜ. ಸಂಸ್ಥೆಯಲ್ಲಿದ್ದ ಭಿನ್ನಾಭಿಪ್ರಾಯದ ಬಗ್ಗೆ ಇದೇ ರೀತಿ ಹೇಳಬೇಕು ಎಂದು ನನಗೆ ಪೋಲೀಸರು ಹೇಳಿದ್ದಾರೆ ಎಂದರೆ ಸರಿಯಲ್ಲ. ಸಿದ್ದರಾಜು ಇವರಿಗೆ ವಿಶ್ವಚೇತನ ಸಂಸ್ಥೆಯಲ್ಲಿ ಯಾವುದೇ ಕಾರ್ಯಚಟುವಟಿಕೆಗಳು ಇರಲಿಲ್ಲ. ಪರಶಿವಮೂರ್ತಿಯವರು ಕಾರ್ಯದರ್ಶಿಯಾಗಿದ್ದರಿಂದ ಸಂಸ್ಥೆಯ ಹಣಕಾಸಿನ ವ್ಯವಹಾರಗಳನ್ನು ಅವರೇ ನೋಡಿಕೊಳ್ಳುತಿದ್ದರು ಎಂದರೆ ನನಗೆ ಗೊತ್ತಿಲ್ಲ. ಸರ್ಕಾರದಿಂದ ಮಂಜೂರಾದ ಎಲ್ಲಾ ಹಣ ಬ್ಯಾಂಕ್ ಖಾತೆ ಮೂಲಕ ಪಾವತಿಯಾಗುತ್ತಿತ್ತು ಎಂದರೆ ನಿಜ. ಆ ಹಣವನ್ನು ನಗದು ರೂಪದಲ್ಲಿ ಪಡೆಯಲು ಅವಕಾಶ ಇಲ್ಲ ಎಂದರೆ ನಿಜ.

***2 ನೇ ಆರೋಪಿ ಪರ ವಕೀಲರು ಗೈರು ಹಾಜರಿದ್ದು 2 ನೇ ಆರೋಪಿತ 1 ನೇ ಆರೋಪಿತ ಪರ ವಕೀಲರು ಮಾಡಿದ ಪಾಟೀ ಸವಾಲುನ್ನು ಅಳವಡಿಸಿಕೊಳ್ಳಲು ಹೇಳುತ್ತಾರೆ.***

**ಪಾಟೀ ಸವಾಲುಃ 3 ಮತ್ತು 4 ನೇ ಆರೋಪಿತರ ಪರ ಶ್ರೀ ಸಿ.ಪಿ ವಕೀಲರಿಂದಃ**

*11.* ಪರಶಿವಮೂರ್ತಿಯವರು ಮೂಲತಃ ಒಂದು ಕಾಲೇಜಿನಲ್ಲಿ ಲೆಕ್ಚರರ್ ಆಗಿದ್ದರೆಂದು ಕೇಳಿ ತಿಳಿದುಕೊಂಡಿದ್ದೇನೆ ಆದರೆ ಯಾವ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದರು ಎಂದು ಗೊತ್ತಿಲ್ಲ. *1999* ರಲ್ಲಿ ನಾನು ಕೆಲಸಕ್ಕೆ ಸೇರಿದಾಗ ಪರಶಿವಮೂರ್ತಿ ಏನು ಉದ್ಯೋಗ ಮಾಡುತ್ತಿದ್ದರು

ಎಂದು ಗೊತ್ತಿಲ್ಲ. ನಾನು ಕೆಲಸಕ್ಕೆ ಸೇರಿ *2* ತಿಂಗಳ ಬಳಿಕ ಅವರು ಲೆಕ್ಚರರ್ ಆಗಿ ಕೆಲಸ ಮಾಡುತ್ತಿದ್ದರು ಎಂದು ಗೊತ್ತಾಗಿತ್ತು. ಅವರು ಕೆಲಸ ಮಾಡುತ್ತಿದ್ದ ಕಾಲೇಜು ಯಾವ ಊರಿನಲ್ಲಿತ್ತು ಎಂದು ಗೊತ್ತಿಲ್ಲ. ಆ ಕಾಲಕ್ಕೆ ಪರಶಿವಮೂರ್ತಿಯವರು ವಿಶ್ವಚೇತನ ಸಂಸ್ಥೆಯ ಕಾರ್ಯದರ್ಶಿಯಾಗಿದ್ದ ಬಗ್ಗೆ ಗೊತ್ತಿಲ್ಲ. ನನಗೆ ಆ ಶಾಲೆಯಲ್ಲಿ ಕೆಲಸ ಖಾಲಿ ಇದ್ದ ಬಗ್ಗೆ *4* ನೇ ಆರೋಪಿತ ವಿಶ್ವನಾಥ ಇವರೇ ಹೇಳಿದ್ದರು. ಕೆಲಸಕ್ಕೆ ಸೇರುವಾಗ ಕೊಟ್ಟ ಹಣವನ್ನು ದೇಣಿಗೆಯಾಗಿ ಕೊಟ್ಟಿದ್ದರ ಅಥವಾ ಕಾಣಿಕೆಯಾಗಿ ಕೊಟ್ಟಿದ್ದರ ಎಂದರೆ ನನಗೆ ಆ ಬಗ್ಗೆ ಗೊತ್ತಿಲ್ಲ. ಆ ಹಣ ಪಾವತಿಸಿದ ಬಗ್ಗೆ ರಶೀದಿ ಕೊಟ್ಟಿಲ್ಲ. ನಾನು ಕೆಲಸಕ್ಕೆ ಸೇರಿದಾಗ ಯಾರು ಮುಖ್ಯ ಶಿಕ್ಷಕರಾಗಿದ್ದರು ಎಂದು ಗೊತ್ತಿಲ್ಲ.

*12.* *2* ವರ್ಷ ಸಂಬಳ ಕೊಡದೇ ಇದ್ದಾಗ ಆ ಬಗ್ಗೆ ವಿದ್ಯಾಸಂಸ್ಥೆಗೆ ನಾನು ನೋಟೀಸ್ ಕೊಟ್ಟಿಲ್ಲ ಮತ್ತು ಪ್ರಕರಣ ದಾಖಲಿಸಿಲ್ಲ. ನಾನು ಕೆಲಸಕ್ಕೆ ಸೇರಿದಾಗ ವಿಶ್ವಚೇತನ ವಿದ್ಯಾಸಂಸ್ಥೆ ಅನುದಾನಿತ ಸಂಸ್ಥೆಯಾಗಿತ್ತು. ಆ ಕಾಲಕ್ಕೆ ಬೇರೆ ಶಿಕ್ಷಕರಿಗೆ ಸಂಬಳ ಬಂದಿತ್ತೋ ಇಲ್ಲವೊ ನನಗೆ ಗೊತ್ತಿಲ್ಲ. ನನಗೆ ನೇಮಕಾತಿ ಪತ್ರವನ್ನು ಪರಶಿವಮೂರ್ತಿಯವರು ಕೊಟ್ಟಿದ್ದರು. ಅವರು ಕಾರ್ಯದರ್ಶಿಯಾಗಿ ಆ ಪತ್ರ ಕೊಟ್ಟಿರಲಿಲ್ಲ. *2020* ರ ಮಾರ್ಚ್ ತಿಂಗಳಲ್ಲಿ ನಿಗದಿಯಾಗಿದ್ದ *10* ನೇ ತರಗತಿ ಪರೀಕ್ಷೆ ಲಾಕ್ ಡ್ವಾನ್ ಇದ್ದ ಕಾರಣ ಮುಂದೂಡಲಾಗಿತ್ತು ಮತ್ತು ಅದು ಅಂದಾಜು ಜೂನ್ ತಿಂಗಳಲ್ಲಿ ನಡೆದಿತ್ತು. *2020* ರ ಮಾರ್ಚ್ ಕೊನೆಯ ವಾರದಿಂದ ಲಾಕ್ ಡಾನ್ ಪ್ರಾರಂಭವಾದಾಗಿನಿಂದ ಲಾಕ್ ಡಾನ್ ಸಡಲಿಕೆಯಾಗುವವರಗೆ ಯಾವುದೇ ಸಭೆಗಳು ನಡೆದಿರಲಿಲ್ಲ ಎಂದರೆ ನಿಜ. ನನ್ನ ಮಗಳು *10* ನೇ ತರಗತಿ ಪರೀಕ್ಷೆ ಬರೆಯುವ ಕಾಲಕ್ಕೆ ನಾನು ಊರಿನಲ್ಲೇ ಇದ್ದೆ ಎಂದರೆ ನಿಜ. *2020* ರ ಜೂನ್ *25* ರಿಂದ ಜುಲೈ *4* ರ ವರೆಗೆ *10* ನೇ ತರಗತಿ ಪರೀಕ್ಷೆ ನಡೆದಿತ್ತು ಎಂದರೆ

ನೆನಪಿಲ್ಲ. ಲಾಕ್ ಡಾನ್ ಕಾಲಕ್ಕೆ ಯಾವುದೇ ಸಭೆ ಸಮಾರಂಭ ನಡೆಸಲು ಸರ್ಕಾರದ ಅನುಮತಿ ಪಡೆಯಬೇಕಿತ್ತು ಎಂದರೆ ನಿಜ.

13. 2015 ರಿಂದ 2018 ರ ಅವದಿಯಲ್ಲಿ ಎರಡು ಕಂತುಗಳಲ್ಲಿ ಬಾಕಿ ವೇತನದ ಹಣವಾದ 5-6 ಲಕ್ಷ ರೂಪಾಯಿ ಸರ್ಕಾರದಿಂದ ಶಿಕ್ಷಕರಿಗೆ ಬಂದಿತ್ತು ಆದರೆ ನನ್ನ ಬಾಕಿ ವೇತನದ ಹಣ ನನ್ನ ಖಾತೆಗೆ ಯಾವಾಗ ಬಂದಿತು ಎಂದು ದಿನಾಂಕ ನೆನಪಿಲ್ಲ. ಆ ಹಣವನ್ನು ನಾನು ಪರಶಿಮೂರ್ತಿ ಮತ್ತು ವಿಶ್ವನಾಥ ಇವರಿಗೆ ಪಾವತಿ ಮಾಡಿದ್ದಕ್ಕೆ ದಾಖಲೆ ಇಲ್ಲ. ಪರಶಿಮೂರ್ತಿಯವರು ಯಾವ ವರ್ಷ ಟ್ರಸ್ಟ್ ಸೆಕ್ರೆಟರಿಯಾಗಿದ್ದರೆಂದು ನನಗೆ ಗೊತ್ತಿಲ್ಲ. ಸಂಸ್ಥೆಯ ಸಭೆಗಳ ಕುರಿತು ನಡಾವಳಿ ಪುಸ್ತಕ ಇಟ್ಟಿರಲಿಲ್ಲ. ಯಾರು ಯಾರು ಎಷ್ಟೆಷ್ಟು ಹಣ ಕೊಡಬೇಕು ಎನ್ನುವುದಕ್ಕೂ ಸಹ ರಿಜಿಸ್ಟರ್ ಇಟ್ಟಿರಲಿಲ್ಲ. ದಿಃ21.09.2020 ರಂದು ಬೆಳಗ್ಗೆ ಪೇಪರ್ ನಲ್ಲಿ ನೋಡಿದಾಗ ನನಗೆ ಪರಶಿಮೂರ್ತಿಯವರ ಕೊಲೆಯಾದ ಬಗ್ಗೆ ಗೊತ್ತಾಗಿತ್ತು. ಆ ದಿನ ಸಂಜೆ ನನ್ನನ್ನು ಪೋ.ಠಾಣೆಗೆ ಕರೆದಿದ್ದರು ಆ ಕಾಲಕ್ಕೆ ಇಬ್ಬರು ಮಫ್ತಿಯಲ್ಲಿದ್ದ ವ್ಯಕ್ತಿಗಳು ನನ್ನನ್ನು ಕರೆದುಕೊಂಡು ಹೋಗಿದ್ದರು. ನಾನು ಹೋದಾಗ ವಿಶ್ವನಾಥ ಮತ್ತು ಪರಶಿವ ಇವರು ಪೋ.ಠಾಣೆ ಹೊರಗಡೆ ಬೆಂಚ್ ನಲ್ಲಿ ಕುಳಿತಿದ್ದರು. ಆ ದಿನ ಸಂಜೆ 7.30 ರಿಂದ 8 ಗಂಟೆಗೆ ನನ್ನನ್ನು ವಿಚಾರಣೆ ಮಾಡಿದ್ದರು. ಆ ಕಾಲಕ್ಕೆ ಜೂನ್ ತಿಂಗಳಿನ ಸಭೆಯಲ್ಲಿ ನಡೆದ ಗಲಾಟೆ ಬಗ್ಗೆ ಮತ್ತು ವಿಶ್ವನಾಥ ಇವರು ಹೊಡೆದು ಸಾಯಿಸುತ್ತೇನೆ ಎಂದು ಹೇಳಿದ ಬಗ್ಗೆ ನಾನು ಪೋಲೀಸರಿಗೆ ಹೇಳಿರಲಿಲ್ಲ. ಆ ಕಾಲಕ್ಕೆ ಆ ಬಗ್ಗೆ ಹೇಳಲು ಯಾವುದೇ ತೊಂದರೆ ಇರಲಿಲ್ಲ ಸಾಕ್ಷಿ ಸ್ವತಃ ಹೇಳುತ್ತಾರೆ ಪೊಲೀಸರು ಕೇಳಿದ್ದಕ್ಕಷ್ಟೆ ನಾನು ಹೇಳಿದ್ದೇನೆ. ಆ ದಿನದಿಂದ ನ್ಯಾಯಾಲಯದಲ್ಲಿ ಹೇಳಿಕೆ ಕೊಡುವ ವರೆಗೆ ನಾನು ಪುನಃ ಯಾವತ್ತು ಪೋ.ಠಾಣೆಗೆ ಹೋಗಿರಲಿಲ್ಲ. ವಿಶ್ವನಾಥ ಮತ್ತು ಪರಶಿವ ಸಂಸ್ಥೆಯ ಕೆಲಸದಿಂದ ನಿವೃತ್ತರಾಗಿದ್ದ ಬಗ್ಗೆ

ನನಗೆ ಗೊತ್ತಿಲ್ಲ. ಪರಶಿಮೂರ್ತಿಯವರ ಅಣ್ಣ ಎಂ.ಎಂ. ನಾಗರಾಜು ಮತ್ತು ಪೋಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

***5* ನೇ ಆರೋಪಿತ *1, 3,* ಮತ್ತು *4* ನೇ ಆರೋಪಿತ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಹೇಳುತ್ತಾರೆ.**

ಮರು ವಿಚಾರಣೆ:- ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು